ಇತ್ಯಾದಿ ಕೇಳಿದರೆ ವಯಕ್ ಅನ್ನಿಸ್ತದೆ ಅವಳಿಗೆ. ನಗಿ ಉಕ್ಕಬೇಕು. ತಂತಾನೆ ಯಾವ ತಡೆಗೂ ಜಗ್ಗದೆ ಮನಸ್ಸಿನ ತಳಾದಿಯಲ್ಲಿ ನೀರಿನ ಒರತೆ ಉಕ್ಕಿದಂತೆ. ಸುಮ್ಮನೆ ಬಾಯ್ತೆಗೆದು ಹಹಹ ಅಂದರೆ ನಗೆಯಾಗುತ್ತದೆಯೇ? ಓಹ್, ಒಂದು ಗುಲ್‌ಮೊಹರ್ ಎಸಳು ಮಾಯಾಗನ್ನಡಿಯ ಹಾಗೆ ಅದೆಷ್ಟು ದೂರ ಪಾತಾಳಗರಡಿ ಹಾಕಿಸಿತ್ತು. ಈಗ ಅಲ್ಲಿ, ಆ ಮಣ್ಣಿನಲ್ಲಿ ಆ ಕುರುಹುಗಳಿಲ್ಲ. ದಣಪೆಯ ಗುಲ್‌ಮೊಹರ್ ಇದ್ದೀತು. ಆದ್ರೆ ನಮ್ಮ ಹಾಂಗೆ ಆಡುವ ಮಕ್ಕಳ ಕಾಣೆ. ಶಾಲಿನಿಗೆ ಬಸ್ಸು ಬಂದಿದ್ದು ತಾನು ಹತ್ತಿ ಕೂತು ನಾರಾಯಣಪುರ ಸ್ಟಾಪಿಗೆ ಇಳಿದಿದ್ದು ಯಾವುದರ ಸ್ವಯವೂ ಇರಲಿಲ್ಲ. ಆ ಪುಟ್ಟ ಗುಲ್‌ಮೊಹರ್ ಎಸಳನ್ನು ಮಾತ್ರ ಜೋಪಾನವಾಗಿ ಪರ್ಸಿನಲ್ಲಿ ಎತ್ತಿಟ್ಟುಕೊಂಡಿದ್ದಳು. ತನ್ನ ಪ್ರೀತಿಯ ಸಾಯಿಬಾಬಾನ ಚಿತ್ರಕ್ಕೆ ಅಂಟಿಕೊಂಡಂತೆ.

> **ಬೆಳ್ಳಗಾಗುವ, ತೆಳ್ಳಗಾಗುವ, ಹಿಮ್ಮಡಿ ನೋವು ಕಮ್ಮಿಯಾಗುವವುಗಳನ್ನು ಖರೀದಿಸೋಣವೇ ಎಂದುಕೊಂಡರೆ, ಅವುಗಳ ನಾಲ್ಕಂಕಿ ಮೀರಿದ ಬೆಲೆಗಳು ಸಾಕಪ್ಪ ಸಹವಾಸ ಅಂತ ಹೆದರಿಸಿದುವು.**



ಇವತ್ತು ಶನಿವಾರವಾದರೂ ಪ್ರತಿಸಲದಂತೆ ಅವಳು ಒಂಚೂರು ಅಡ್ಡಾಗಿ ರೆಸ್ಟ್ ಮಾಡುವ ಅಂತಾಗಲಿಲ್ಲ. ನಾಳೆಯ ಮನೆ ಸ್ವಚ್ಛತೆಯ ಕಾರ್ಯಕ್ರಮದ ಮುಕ್ಕಾಲು ಇಂದೇ ಮುಗಿಸಬೇಕಿತ್ತು. ಮನೆಯನ್ನು ದಿನಕ್ಕೆ ಮೂರು ಬಾರಿ ಉಜ್ಜಿದರೂ ಅವಳಿಗೆ ಬೇಸರವಿರಲಿಲ್ಲ. ಒಳಹೊಕ್ಕರೆ ಗುಡಿ ಹೊಕ್ಕಂತೆ ಶಾಂತವಾಗಿರಬೇಕು, ಶುಚಿಯಾಗಿರಬೇಕು. ಇದು ಅವಳಿಗೆ ಅವಳೇ ಹಾಕಿಕೊಂಡ ನಿಯಮವಾಗಿತ್ತು. ಗಂಡಮಕ್ಕಳು ಅದನ್ನೇನೂ ತಮಗೆ ಅನ್ವಯಿಸಿಕೊಂಡಿರಲಿಲ್ಲ. ಮತ್ತು ಅವಳನ್ನು ನಿಯಮಬಾಹಿರಗೊಳಿಸಲಾಗದೆ ಕೈಬಿಟ್ಟಿದ್ದರು. ಹೀಗಾಗಿ ಶಾಲಿನಿಗೆ ತಾನುಂಟು, ತನ್ನ ಮನೆಯುಂಟು ಎನ್ನುವಂತೆ ಆಗಿಬಿಟ್ಟಿತ್ತು. ಇಂದು ಬಚ್ಚಲ ತಿಕ್ಕುವಲ್ಲಿ, ನೆಲ ಒರೆಸುವಲ್ಲಿ ಹೆಚ್ಚು ಉಮೇದಿಯ ಪಲಕುಗಳಿದ್ದುದು ಅವಳಿಗೇ ಅರಿವಾಗುತ್ತಿತ್ತು.

ನಾಳೆ ಶಾಲಿನಿ ಮತ್ತು ಅವಳ ಗಂಡ ಹುಬ್ಬಳ್ಳಿಗೆ ಹೋಗುವವರಿದ್ದರು. ಸುಮ್ಮನೆ ಸಂತೆಪೇಟೆಗಲ್ಲ. ಅದನ್ನವಳು ಎಂದೋ ಕೈಬಿಟ್ಟಿದ್ದಳು. ಅವಳ ಗಂಡ ಪ್ರದೀಪ ಹೆಂಡತಿಗೆ ಮನಸ್ಸಿಲ್ಲದ್ದರಿಂದ ಅವಳನ್ನು ಗೋಳಾಡಿಸದೆ ತಾನೇ ಅದನ್ನೆಲ್ಲ ನಿರ್ವಹಿಸುತ್ತಿದ್ದ. ಆದರೀಗ ಶಾಲಿನಿ ಹೋಗಲೇಬೇಕಿತ್ತು. ಹುಬ್ಬಳ್ಳಿಯಲ್ಲಿ ನಾಳೆ ನಡೆಯಲಿರುವ 'ಸುವಿಧಾ ಮೆಡಿಕಲ್ ಹೆಲ್ತ್‌ಲೈನ್' ಎಂಬ ಏಜೆನ್ಸಿಯವರು ಕಾಂಟಾಕ್ಟ್ ಮಾಡಿದ್ದು ಇವಳನ್ನೇ. ಶಾಲಿನಿ ಕಂಡದ್ದೆಲ್ಲ ಬೇಕು ಎನ್ನುವ, ಸಿಕ್ಕಿದ್ದನ್ನೆಲ್ಲ ತಂದು ಮನೆ ಗೋಡೌನು ಮಾಡುವ ಜಾಯಮಾನದವಳಲ್ಲ. ಯಾರಾದರೂ ಮಸ್ಕಾ ಹೊಡೆದರೆ, ನಂಬುವ, ಪೆದ್ದು ಪೆದ್ದಾಗಿ ಮುದ್ದು ಮುದ್ದಾಗಿ ಮಾತನಾಡಿದರೆ ಮೆಚ್ಚುವ ಎಳಕಲೂ ಅಲ್ಲ. ಬದುಕು ಕರೆದುಕೊಂಡು ಹೋದಲೆಲ್ಲ ನಿಂತು, ಬಾಯಾರಿಸಿದಾಗಲೆಲ್ಲ ನೀರು ಕುಡಿದು, ಅದೆಷ್ಟು ಜನರೊಟ್ಟಿಗೆ ಗುದುಮುರಿಗೆ ಹಾಕಿಯೂ ನೆಲಕೆ ಗಟ್ಟಿ ನಿಂತಿಲ್ಲ! ಆದರೂ... ಅಂಥ ಶಾಲಿನಿಯೂ ನಾಳೆ ಹೊರಡಲು ಸಿದ್ಧಳಾಗಿದ್ದಾಳೆಂದರೆ... ಪ್ರದೀಪ ಹೇಳಿ ಹೇಳಿದ್ದ ಬಿಡೆ ಮಾರಾಯ್ತಿ. ಯಾವ್ ಸೋಳೆಮಕ್ಕ ತಂ ಕಂಪನಿ ಲಾಸ್ ಮಾಡ್ಕಂಡ ಜನ್ರಿಗೆ ಹೆಲ್ಪ ಮಾಡ್ತರ? ನೀ ಯೇನ್ ಸಣ್ಣ ಮಕ್ಕ